ತೀರ್ಮಾನಕ್ಕೆ ಬಿಡಲಾಗಿದೆ. ಅದರಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಯಾವ ಉತ್ಸವವನ್ನು ಹಾಗೂ ಉತ್ಸವವನ್ನು ನಡೆಸುವ ಸ್ಥಳದ ತೀರ್ಮಾನವನ್ನು ಗ್ರಾಮಾಂತರ ಜಿಲ್ಲಾ ಉತ್ಸವ ಸಮಿತಿಗೆ ಬಿಡಲಾಗಿದೆ. ಉತ್ಸವ ನಡೆಸಲು ಬೇಕಾಗುವ ವೆಚ್ಚವನ್ನು ಅವರೇ ತೀರ್ಮಾನಿಸುವರು.

ಮಾಗಡಿ ಜಿಲ್ಲಾ ಹೆದ್ದಾರಿಗಳಿಗೆ ಡಾಂಬರೀಕರಣ

2310 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಾಗಡಿ ತಾಲ್ಲೂಕಿನಲ್ಲಿರುವ ಜಿಲ್ಲಾ ಹೆದ್ದಾರಿಗಳ ಉದ್ದ ಎಷ್ಟು?*

ಆ) *ಈ ರಸ್ತೆಗಳಲ್ಲಿ ಎಷ್ಟು ಕಿ.ಮೀ.ಗೆ ಡಾಂಬರೀಕರಣ ಮಾಡಿರುವುದಿಲ್ಲ?*

ಇ) *ಈ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲು ತಗಲುವ ಒಟ್ಟು ವೆಚ್ಚವೆಷ್ಟು?*

ಈ) *ಈ ಕಾಮಗಾರಿಯನ್ನು ಸರಕಾರವು ಯಾವಾಗ ಕೈಗೊಳ್ಳುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಜಿಲ್ಲಾ ಹೆದ್ದಾರಿಗಳ ಒಟ್ಟು ಉದ್ದ 167 ಕಿ.ಮೀ. ಇರುತ್ತದೆ.

ಆ) 46.0 ಕಿಮೀ. ಉದ್ದಕ್ಕೆ ಡಾಂಬರು ಮಾಡಿರುವುದಿಲ್ಲ.

ಇ) ತಗಲುವ ಒಟ್ಟು ವೆಚ್ಚ 115.00 ಲಕ್ಷ ರೂ.ಗಳು.

ಈ) ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

ಪಶುವೈದ್ಯಕೀಯ ಸಹಾಯಕರ ಹುದ್ದೆಗಳ ಭರ್ತಿ

2312 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇತ್ತೀಚೆಗೆ ಎಷ್ಟು ಪಶುವೈದ್ಯಕೀಯ ಸಹಾಯಕರ ಹುದ್ದೆಗೆ ಸಂದರ್ಶನ ನಡೆದಿದೆ?*

ಆ) *ಈ ಹುದ್ದೆಯ ನೇಮಕಾತಿಯ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಇದಕ್ಕೆ ಕಾರಣಗಳೇನು?*

ಇ) *ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?*

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 750

ಆ) 1) ಬಂದಿದೆ.

2) ಮೈಸೂರಿನಲ್ಲಿ ನಡೆದ ಪಶುವೈದ್ಯಕೀಯ ಸಹಾಯಕರ ತರಬೇತಿಗೆ ನಡೆದ ಸಂದರ್ಶನದ ಬಗ್ಗೆ ದೂರುಗಳು ಬಂದಿದ್ದರಿಂದ ದೂರುಗಳು ಸರ್ಕಾರದ ಪರಿಶೀಲನೆಯಲ್ಲಿವೆ. ಬೆಂಗಳೂರು ವಿಭಾಗದ ಸಂದರ್ಶನದ ಆಯ್ಕೆಪಟ್ಟಿಯನ್ನು ಪ್ರಕಟಿಸಿರುವುದಿಲ್ಲ, ಹಾಗೂ ಬೆಳಗಾಂ ಮತ್ತು ಗುಲ್ಬರ್ಗಾ ವಿಭಾಗದ ಸಂದರ್ಶನದ ಪ್ರಕ್ರಿಯೆಯನ್ನು ಪ್ರಾರಂಬಿಸಿಲ್ಲ.

ಇ) ಪಶುವೈದ್ಯಕೀಯ ಸಹಾಯಕರ ಹುದ್ದೆಗೆ ತರಬೇತಿ ಹೊಂದಿದ ಅಭ್ಯರ್ಥಿಗಳು ಲಭ್ಯವಾದ ಕೂಡಲೇ ಭರ್ತಿ ಮಾಡಲಾಗುವುದು.

ಮಾಗಡಿ ತಾಲ್ಲೂಕಿನ ಲೋಕೋಪಯೋಗಿ ರಸ್ತೆಯ ದುರಸ್ತಿ

2313 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಯಾವುವು? ಸಂಪೂರ್ಣ ವಿವರ ನೀಡುವುದು.

ಆ) ಈ ರಸ್ತೆಗಳು ಅತ್ಯಂತ ಶಿಥಿಲವಾಗಿದ್ದು ಸಾರಿಗೆ ಸಂಪರ್ಕಕ್ಕೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಒಟ್ಟು ತಗಲುವ ವೆಚ್ಚ ಎಷ್ಟು?

ಈ) ಈ ಕಾಮಗಾರಿಯು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ವಿವರಗಳನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

ಆ) ರಸ್ತೆಗಳು ಅತ್ಯಂತ ಶಿಥಿಲವಾಗಿಲ್ಲ. ಆದರೆ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. (ರಾಜ್ಯ ಹೆದ್ದಾರಿ ರಸ್ತೆ - 12 ಕಿಮೀ. ಮತ್ತು ಜಿಲ್ಲಾ ಮುಖ್ಯ ರಸ್ತೆ - 30 ಕಿ.ಮೀ.).

ಇ) 102 ಲಕ್ಷ ರೂಪಾಯಿಗಳು.

ಈ) ಹಣಕಾಸಿನ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.